ದಿನಾಂಕಃ 11.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದ:**

ನಮ್ಮ ಗ್ರಾಮದಲ್ಲಿ ನನ್ನನ್ನು ಹೊರತುಪಡಿಸಿ ಇತರೆ ಯಾರು ಕೆ.ಎ ಅಶೋಕ್ ಗೌಡ ಎಂಬುವ ವ್ಯಕ್ತಿ ಇರುವುದಿಲ್ಲ. ನಿಡಿ-22 ನನಗೆ ಸೇರಿದ ದಾಖಲಾತಿಯಾಗಿರುತ್ತದೆ. ಕೆ.ಎ ವಿರೂಪಾಕ್ಷ ಬಿನ್ ಕೆ. ಎಸ್ ಅಣ್ಣೇಗೌಡ ಎಂಬುವವರ ನನ್ನ ಸಂಬಂಧಿಕಾರಾಗಿರುತ್ತಾರೆ. ಅವರು ನನ್ನ ತಮ್ಮ ಎಂದರೆ ಸರಿ. ನಿಡಿ-21 ರಲ್ಲಿ ನಮೂದಿಸಿರುವಂತಹ ವ್ಯಕ್ತಿಗಳು ನನ್ನ ಸಹೋದರರು ಎಂದರೆ ಸರಿ. ನಿಡಿ-26 ರಂತೆ ನಮ್ಮ ಜಮೀನುಗಳು ಪೋಡಾಗಿರುತ್ತವೆ ಎಂದರೆ ಸರಿ. ಪ್ರಸ್ತುತವಾಗಿ ಸ.ನಂ.79 ರ ಜಮೀನಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಬರುತ್ತಿಲ್ಲ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯ ಪ್ರಕಾರ ಸ.ನಂ.345 ರಲ್ಲಿರುವ ಜಮೀನು ನನ್ನ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದು ಗುರುತಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ-27 ಎಂದು ಗುರುತಿಸಲಾಯಿತು. ದಾವೆಯನ್ನು ಸಲ್ಲಿಸಿದ ನಂತರ ದಾವಾ ಸ್ವತ್ತಿನ ಸ.ನಂ.79 ಹೊಸದಾಗಿ ಸ.ನಂ.345 ಆಗಿ ಮಾರ್ಪಾಡಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲದ ಕಾರಣ ನಾನು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಸ.ನಂ.79 ರ ಜಮೀನಿಗೆ ಸಂಬಂಧಿಸಿದಂತೆ ದಾವೆಯನನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಪಕ್ಕಾಪೋಡಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಪಕ್ಕಾಪೋಡಿಯಾದ ನಂತರ ನಾನು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಸದರಿ ವಿಷಯವನ್ನು ನನ್ನ ಪ್ರಮಾಣ ಪತ್ರಿಕೆಯಲ್ಲಿ ನಮೂದಿಸಿರುವ ಬಗ್ಗೆ ನೆನಪಾಗುತ್ತಿಲ್ಲ. ಸ.ನಂ.345 ಕ್ಕೆ ಸಂಬಂಧಿಸಿದಂತೆ ಸರ್ವೇ ಟಿಪ್ಪಣಿ, ಪಿ.ಟಿ ಶೀಟ್ ಮತ್ತು ಪೋಡಿ ನಕ್ಷೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಹಾಜರು ಮಾಡಿರುವುದಿಲ್ಲ. ಸ.ನಂ.79 ರ ಜಮೀನಿನಲ್ಲಿ ನಾನು ಎಂದಿಗೂ ಸ್ವಾಧೀನ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ.ನಂ.79 ರ ಜಮೀನು ಹೊಸದಾಗಿ ಸ.ನಂ.345 ಎಂದು ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಕುರಿತು ನನ್ನ ವಾದಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ಮಾಡಿರುವುದು ನೆನಪಿರುವುದಿಲ್ಲ. ಸ.ನಂ.79 ರ ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸ.ನಂ.345 ಆಗಿ ಪೋಡಿಯಾಗಿರುವ ವಿಷಯವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.